ಬಯೋಕಾನ್ 

Biocon

# ಪರಿಸರ, ಆರೋಗ್ಯ ಹಾಗೂ ಸುರಕ್ಷಣಾ ನೀತಿ

ಬಯೋಕಾನ್ ಸಮೂಹ ಸಂಸ್ಥೆಯು ಒಂದು ಏಕೀಕೃತ ಜೈವಿಕ ಔಷಧ ಸಂಸ್ಥೆಯಾಗಿದ್ದು ಮತ್ತು ತನ್ನದೇ ಆದ ಇತರ ಸಹ ಸಂಸ್ಥೆಗಳನ್ನು ಒಳಗೊಂಡಿರುತ್ತದೆ.

ನಾವು ಈ ಕೆಳಗಿನವುಗಳ ಮೂಲಕ ಪರಿಸರ, ಆರೋಗ್ಯ ಹಾಗೂ ಸುರಕ್ಷಣಾ ನೀತಿಯನ್ನು ಸಾಧಿಸುತ್ತೇವೆ.

- ಬಯೋಕಾನ್ ಸಮೂಹ ಸಂಸ್ಥೆ ಕಾರ್ಯ ನಿರ್ವಹಿಸುತ್ತಿರುವ ದೇಶಗಳಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಶಾಸನಬದ್ಧವಾದ ಹಾಗೂ ಕಾನೂನು ರೀತಿಯ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಸುಸ್ಥಿರ ವಿಧಾನ ಅನುಸರಿಸುವ, ಕಚ್ಚಾ ವಸ್ತುವಿನ ಖರೀದಿಯಿಂದ ನಮ್ಮ ಉತ್ಪನ್ನಗಳ ವಿತರಣೆಯವರೆಗೂ ಪರಿಸರಕ್ಕೆ ಧಕ್ಕೆಯಾಗದಂತೆ ಎಚ್ಚರವಹಿಸುವ ಜವಾಬ್ದಾರಿಯುತ ಉದ್ಯಮಗಳ ಜೊತೆ ಸ್ನೇಹ ಸಂಬಂಧ ಬೆಳೆಸುವುದು.
- ಗುಣಮಟ್ಟ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆಯನ್ನು ಪರಿಸರ ಮಾಲಿನ್ಯ ನಿಯಂತ್ರಿಸುವ ಮೂಲಕ ಪರಿಸರ, ಆರೋಗ್ಯ ಮತು ಸುರಕ್ಷತೆಗೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಖಾನೆಯ ಉದ್ಯೋಗಿಗಳಿಗೂ ಹಾಗೂ ಸಂಬಂಧಪಟ್ಟ ಎಲ್ಲರಿಗೂ ತರಬೇತಿ ನೀಡುವುದು.
- ಶಕ್ತಿಯ ಸಂರಕ್ಷಣೆ, ಪುನರ್ ಉತ್ಪಾದನೆ, ತ್ಯಾಜ್ಯದ ಪುನರ್ಬಳಕೆ ಮತ್ತು ತ್ಯಾಜ್ಯ ಉತ್ಪಾದನೆಗೆ ಮಿತಿ ವಿಧಿಸುವುದು. ಹವಾಮಾನ ವೈಪರೀತ್ಯದಿಂದ ಉಂಟಾಗುವ ಸಮಸ್ಯೆ ಕಡಿಮೆ ಮಾಡುವುದರ ಜೊತೆಗೆ ಜೀವವೈವಿಧ್ಯದ ಬದುಕಿಗೆ ತೊಂದರೆಯಾಗದಂತೆ ಎಚ್ಚರವಹಿಸುವುದು.
- ಶಕ್ತಿಯ ಮಿತಬಳಕೆ ತ್ಯಾಜ್ಯ ವಸ್ತುಗಳ ಪುನರ್ ಬಳಕೆ ಮತ್ತು ತ್ಯಾಜ್ಯ ವಸ್ತುಗಳ ಉತ್ಪಾದನೆಯನ್ನು ಕಡಿಮೆಗೊಳಿಸುವುದು ಹಾಗೂ ಅಪಾಯಕಾರಿ ವಸ್ತುಗಳನ್ನು ಬಳಸದೆ ಇರುವ ಅಥವಾ ಕಡಿಮೆ ಬಳಸುವುದರ ಮೂಲಕ ಕೆಲಸ ಕ್ರಿಯೆಗಳಲ್ಲಿ ಅಪಾಯದ ಮಟ್ಟವನ್ನು ಕಡಿಮೆಗೊಳಿಸುವುದು.
- ಪರಿಸರ ಆರೋಗ್ಯ ಹಾಗೂ ಸುರಕ್ಷತಾ ನಿರ್ವಾಹಣಾ ಕ್ರಮದ ಅಭಿವೃದ್ಧಿಯನ್ನು ಕಾಲಾನುಕಾಲದಲ್ಲಿ ಮತ್ತು ಸರಿಯಾದ ವೀಕ್ಷಣೆಯ ಮೂಲಕ ಮೌಲ್ಯಮಾಪನ ಮಾಡುವುದು ಹಾಗೂ ಪರಿಸರ, ಆರೋಗ್ಯ ಮತ್ತು ಸುರಕ್ಷತೆಯ ಧ್ಯೇಯೋದ್ದೇಶಗಳನ್ನು ಹೊಂದಲು ಮತ್ತು ಪುನರ್ ವಿಮರ್ಶೆ ಮಾಡಲು ಸರಿಯಾದ ಮಾರ್ಗಸೂಚಿಯನ್ನು ಒದಗಿಸುವುದು.
- ನಾವು ಪರಿಣಾಮಕಾರಿ ಸಂಪರ್ಕ ವ್ಯವಸ್ಥೆ ಹೊಂದುವ ಹಾಗೂ ನಮ್ಮ ಕಾರ್ಯ ವಿಧಾನಗಳನ್ನು ಸತತವಾಗಿ ಸುಧಾರಿಸುವ ಮೂಲಕ ಪರಿಸರ, ಆರೋಗ್ಯ ಹಾಗೂ ಸುರಕ್ಷೆತೆಯ ವಿಷಯದಲ್ಲಿ ಅತ್ಯಾಧುನಿಕ ವಿಧಾನಗಳನ್ನು ಅಳವಡಿಸಿಕೊಳ್ಳುವುದು.

Kiran Mazumdar-Shaw

ಕಿರಣ್ ಮಜುಂದಾರ್ ಷಾ

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ತುರ್ತು ಸಂಪರ್ಕ ಸಂಖ್ಯೆ : 2000

ದಿನಾಂಕ : 25–10–2016

V: 006